ಎಂ ವಿ ಸಿ ನಂ. 93/2022
ಪಿ ಡಬ್ಲ್ಯೂ: 1
ದಿನಾಂಕ 27-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ಅರ್ಜಿದಾರರ ಪರ: ಶ್ರೀ ಹೆಚ್ ಎನ್ ಎಸ್ ವಕೀಲರಿಂದ:</u>

ನಮ್ಮ ಸಂಸ್ಥೆಯಿಂದ 1 ನೇ ಎದುರುದಾರರಿಗೆ ಚಾಲನಾ ಪರವಾನಿಗಿ ಹಾಜರುಪಡಿಸುವಂತೆ ನೋಟೀಸು ನೀಡಿರುತ್ತೇವಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನೋಟೀಸಿನ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು ಅದರ ಸ್ವೀಕೃತಿ ಕಳೆದಿದೆ ಎಂದು ನುಡಿಯುತ್ತಾರೆ. ಸದರಿ ನೋಟೀಸಿನ ಆಧಾರದಲ್ಲಿ ಏನು ಕ್ರಮ ಜರುಗಿಸಲಾಗಿದೆ ಎಂದು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯ ವತಿಯಿಂದ ತನಿಖಾಧಿಕಾರಿಗಳು ಇರುತ್ತಾರೆ ಎಂದರೆ ಸರಿ. ನಮ್ಮ ಸಂಸ್ಥೆಯ ತನಿಖಾಧಿಕಾರಿಗಳಿಂದ ತನಿಖೆ ಮಾಡಿಸಿರುತ್ತೇವಾ ಎಂದರೆ ಸಾಕ್ಷಿ ನ್ಯಾಯಾಲಯದಿಂದ ಸಮನ್ಸ್ ಬಂದ ನಂತರವೇ ಸದರಿ ಅಪಘಾತದ ವಿಚಾರ ನಮಗೆ ಗೊತ್ತಿರುತ್ತದೆ, ಆದ್ದರಿಂದ ತನಿಖೆ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಸೂಕ್ತ ಆಧಾರ ಇಲ್ಲದೆ 1 ನೇ ಎದುರುದಾರರಿಗೆ ಚಾಲನಾ ಪರವಾನಿಗಿ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಥಮ ವರ್ತಮಾನ ವರದಿ ಮತ್ತು ಚಾರ್ಜ್ ಶೀಟಿನಲ್ಲಿ 1 ನೇ ಎದುರುದಾರರಿಗೆ ಚಾಲನಾ ಪರವಾನಿಗಿ ಇಲ್ಲವೆಂದು ಕಾಣಿಸಲಾಗಿದೆ ಎಂದು ನುಡಿಯುತ್ತಾರೆ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರಿಗೆ ಸೂಕ್ತವಾದ ಚಾಲನಾ

ಪರವಾನಿಗಿ ಇದ್ದರೂ ಸಹ ನಮ್ಮ ಸಂಸ್ಥೆಯ ಬಾದ್ಯಸ್ಥಿಕೆಯನ್ನು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.